**ಸಾರ್ವಜನಿಕ ಶಿಕ್ಷಣ ಕ್ಷೇತ್ರದಲ್ಲಿ ಸಾರ್ವಜನಿಕ ತಂತ್ರಾಂಶದ ಸಾಫ್ಟವೇರ್ ತತ್ವಗಳು - ದಕ್ಷಿಣ ಭಾರತೀಯ ಮಟ್ಟದ ಕಾರ್ಯಗಾರ – 1-2 ಫೆಬ್ರವರಿ, ಬೆಂಗಳೂರು**

ಯುನೆಸ್ಕೋ, ಈ-ಗವರ್ನೆನ್ಸ್ ಡಿಪಾರ್ಟಮೆಂಟ್, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಸರ್ವ ಶಿಕ್ಷಣ ಅಭಿಯಾನ, ಕರ್ನಾಟಕ ಜ್ಞಾನ ಆಯೋಗ (ಕರ್ನಾಟಕ ನಾಲೆಡ್ಜ್ ಕಮೀಷನ್) ಮತ್ತು ಐಟಿ ಫಾರ್ ಚೇಂಜ್ ಜೊತೆಗೂಡಿ ' **ಸಾರ್ವಜನಿಕ ಶಿಕ್ಷಣ ಕ್ಷೇತ್ರದಲ್ಲಿ ಸಾರ್ವಜನಿಕ ತಂತ್ರಾಂಶದ ಸಾಫ್ಟವೇರ್ ತತ್ವಗಳು**" ಎಂಬ ಕಾರ್ಯಾಗಾರವನ್ನು ಸಂಘಟಿಸುತ್ತಿದೆ.

ಭಾರತದಲ್ಲಿ ಸಾರ್ವಜನಿಕ ವಿಭಾಗವು ಅತ್ಯುತ್ತಮವಾಗಿ ಅನುಷ್ಠಾನಗೊಂಡಿದ್ದು ಇದು ಸ್ಪಷ್ಟವಾದ ನಿರ್ದೇಶನದ ತತ್ವಗಳನ್ನು ಒಳಗೊಂಡಿದೆ. ಸಮತೆ, ಸಾಮಾಜಿಕ ಸಬಲೀಕರಣ ಮತ್ತು ಇನ್ನಿತರ ನ್ಯಾಯಿಕ ವಿಷಯಗಳಿಗೆ ಸಂಬಂಧಪಟ್ಟ ಕಾರಣಗಳಿಗೆ ಇದು ಬೆಂಬಲವನ್ನು ನೀಡುತ್ತಿದೆ.

**ಸಾರ್ವಜನಿಕ ವಿಭಾಗದಲ್ಲಿ ಸಾಫ್ಟವೇರ್ ತತ್ವಗಳು**

ಸಾರ್ವಜನಿಕ ವಿಭಾಗದ ನಿರ್ದೇಶನದ ತತ್ವಗಳನ್ನು ಸಾಫ್ಟವೇರ್ ಆರ್ಕಿಟೆಕ್ಚರ್ ಗಳಿಗೆ ವಿವರಿಸಬೇಕಾಗುತ್ತದೆ.ಮಾಹಿತಿ ಸಂವಹನ ತಂತ್ರಜ್ಞಾನವು ಮಾಹಿತಿ ಮತ್ತು ಸಂವಹನದಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುತ್ತಿದೆ. ಸಾರ್ವಜನಿಕ ಕ್ಷೇತ್ರದಲ್ಲಿ ಸಾಫ್ಟವೇರ್ ನ್ನು ಅಳವಡಿಸಿಕೊಳ್ಳುವುದರ ಜವಬ್ದಾರಿ ಮತ್ತು ಪಾತ್ರವನ್ನು ಅರ್ಥಮಾಡಿಕೊಳ್ಳುವ ಅವಶ್ಯಕತೆಯಿದೆ.

ಸಾರ್ವಜನಿಕ ವಿಭಾಗದಲ್ಲಿ ಗಣಕೀಕೃತಗೊಂಡ ಕಾರ್ಯಕ್ರಮಗಳ ಬಗ್ಗೆ ಈ ಮುಂದಿನ ವಿಷಯಗಳಿಗೆ ಸಂಬಂಧಿಸಿದಂತೆ ಎಚ್ಚರಿಕೆಯಿಂದ ಚಿಂತಿಸುವುದು ಅವಶ್ಯಕವಾಗಿದೆ.ಸಾರ್ವಜನಿಕ ಜವಬ್ದಾರಿ,ಲಭ್ಯವಾಗುವಂತ ವೆಚ್ಚ ಇದು ಸಮತೆಯ ಮೇಲೆ ಪರಿಣಾಮವನ್ನು ಬೀರಬಹುದು.ಸಾರ್ವತ್ರಿಕ ಸೇವೆಯನ್ನು ಒದಗಿಸುವುದು ಇದು ಸೇವೆ ಒದಗಿಸುವವರ ಸ್ವತಂತ್ರತೆಯನ್ನು ಅವಲಂಭಿಸಿದೆ ಮತ್ತು ಸಮುದಾಯದ ಭಾಗವಹಿಸುವಿಕೆಯ ಉತ್ತೇಜನ ಇತ್ಯಾದಿ.

ಪ್ರಸ್ತಾವನೆಯಲ್ಲಿರುವ ಕಾರ್ಯಾಗಾರವು ಭಾಗವಹಿಸುವವರನ್ನು ಉತ್ತೇಜಿಸುತ್ತಿದೆ.ವಿವಿಧ ಇಲಾಖೆಯಲ್ಲಿರುವ ನಿಯಮ ರಚಿಸುವವರು ಸಾಫ್ಟವೇರ್ ತತ್ವಗಳನ್ನು ಸಾರ್ವಜನಿಕ ಕ್ಷೇತ್ರದಲ್ಲಿನ ಸಾಫ್ಟವೇರ್/ಗಣಕೀಕೃತ ವ್ಯವಸ್ಥೆಯಲ್ಲಿ ಅರ್ಥಪೂರ್ಣವಾಗಿ ಸಂಯೋಜನೆ ಮಾಡಲು ಸಹಾಯವನ್ನು ಮಾಡುತ್ತದೆ.

**ಶಿಕ್ಷಣ**

ಸಾರ್ವಜನಿಕ ಶಿಕ್ಷಣವು ಪ್ರಮುಖವಾದ ಭಾಗವಾಗಿದ್ದು ಶಿಕ್ಷಕರು ಮತ್ತು ಕಲಿಕೆದಾರರಿಂದ ಇದು ಮಾಹಿತಿಯನ್ನು ಸಂಗ್ರಹಣೆ ಮಾಡುವ ಮತ್ತು ಜ್ಞಾನವನ್ನು ರಚಿಸುವಂತ ಕೆಲಸವನ್ನು ಮಾಡುತ್ತಿದೆ.ಮಾಹಿತಿ ಮತ್ತು ಸಂವಹನದಲ್ಲಿ ಇದು ಪ್ರಮುಖವಾದ ಭಾಗವಾಗಿದೆ. ಶಿಕ್ಷಣದಲ್ಲಿ ಸಾಂಪ್ರದಾಯಿಕ ಪದ್ಧತಿಯನ್ನು ಅಳವಡಿಸಿಕೊಳ್ಳುವುದು ಕಲಿಕೆಯಲ್ಲಿ ಅಷ್ಟು ಪರಿಣಾಮವನ್ನು ಬೀರುವುದಿಲ್ಲ. ಶಿಕ್ಷಣದಲ್ಲಿ ಐಸಿಟಿಯನ್ನು ಬಳಸಿಕೊಳ್ಳುವುದರಿಂದ ಮಾಹಿತಿಗಳ ಹಂಚುವಿಕೆ ಸುಲಭವಾಗುತ್ತದೆ.

ಬಹಳಷ್ಟು ರಾಜ್ಯಗಳಲ್ಲಿ ಇವತ್ತಿಗೂ ಕೂಡಾ ಶಾಲಾ ವ್ಯವಸ್ಥೆಯಲ್ಲಿ ಐಸಿಟಿಯನ್ನು ಬಳಸಿಕೊಳ್ಳುತ್ತಿಲ್ಲ. ಶಿಕ್ಷಣ ಸಂಸ್ಥೆಗಳಲ್ಲಿ ಇತರ ಸೌಲಭ್ಯಗಳನ್ನು ನೀಡುವಂತೆ ಐಸಿಟಿ ಬಳಕೆಗೂ ಉತ್ತೇಜನವನ್ನು ನೀಡಬೇಕು.

ಕೇರಳ ರಾಜ್ಯದ IT@ School ಕಾರ್ಯಕ್ರಮದಲ್ಲಿ ಇಂತಹಾ ಅನೇಕ ಸಾಫ್ಟವೇರ್ ತತ್ವಗಳನ್ನು ಅನುಷ್ಠಾನ ಮಾಡಲಾಗಿದೆ. ಪ್ರಸ್ತುತ ಕಾರ್ಯಾಗಾರವು ಈ ಅಂಶಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಒದಗಿಸಲಿದೆ.

**ಕಾರ್ಯಾಗಾರದ ಉದ್ದೇಶಗಳು**

- ಸಾಫ್ಟವೇರ್ ತತ್ವಗಳು ಮತ್ತು ಇತರ ಪರಿಕಲ್ಪನೆಯನ್ನು ಸಾರ್ವಜನಿಕ ವಿಭಾಗಕ್ಕೆ ಅರ್ಥೈಸುವುದು
- ದಕ್ಷಿಣದ ರಾಜ್ಯಗಳು ಸಾರ್ವಜನಿಕ ಸಾಫ್ಟವೇರ್ ನ್ನು ಬಳಸಿ ಹಮ್ಮಿಕೊಂಡ ಕಾರ್ಯಕ್ರಮ (ಯೋಜನೆ)ಗಳ ಅನುಭವ ಮತ್ತು ಕಲಿಕೆಗಳ ಹಂಚಿಕೆ ಮತ್ತು ಸವಾಲುಗಳ ಬಗ್ಗೆ ಬೆಳಕುಚೆಲ್ಲುವುದು.

ಈ ಕಾರ್ಯಾಗಾರದ ಮುಖ್ಯವಾದ ಉದ್ದೇಶವು ಚರ್ಚೆಗಳಿಂದ ಎರಡು ದಾಖಲೆಗಳನ್ನು ಸೃಷ್ಟಿಸುವುದಾಗಿದೆ.*'ಸಾರ್ವಜನಿಕ ವಿಭಾಗದ ಸಾಫ್ಟವೇರ್ ಗೆ ಮಾರ್ಗದರ್ಶಕ ತತ್ವಗಳು", 'ಸಾರ್ವಜನಿಕ ಸಾಫ್ಟವೇರ್ ಯೋಜನೆಗಳ ಅನುಭವಗಳು, ಕಲಿಕೆಗಳ ಜೊತೆಗೆ ಸವಾಲುಗಳು"*

ಈ ದಾಖಲೆಗಳು ಕೇರಳ ಸರ್ಕಾರ, ಯುನೆಸ್ಕೋ, ಸೊಲ್ಯುಶನ್ ಎಕ್ಸಚೇಂಜ್, ಐಟಿ ಫಾರ್ ಚೇಂಜ್ ಮಾರ್ಚ್ 2010 ರಲ್ಲಿ ಸಂಘಟಿಸುವ ಅಂತರಾಷ್ಟ್ರೀಯ ಕಾರ್ಯಾಗಾರಕ್ಕೆ ಬುನಾದಿಯನ್ನು ಒದಗಿಸಲಿದೆ.